Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು

ಸಂಪುಟ 32 ಸಂಚಿಕೆ 25] ಸೋಮವಾರ 11—10—48 [ಬಿಡಿ ಪ್ರತಿ 3 ಪೈ

೩೨ ವರ್ಷಗಳಿಂದಲೂ ಅವಿಶ್ರಾಂತವಾಗಿ ಜನಸೇವೆ ಮಾಡುತ್ತಿರುವ "ಸತ್ಯವಾದಿ" ಸ್ಥಾಪಕರು ನಮ್ಮನ್ನಗಲಿ ೧೮ ವರ್ಷಗಳಾದವು

ಆ ಪುಣ್ಯಶ್ಲೋಕರ ಸ್ಮರಣಾರ್ಥವಾಗಿ ಈ ಸಂಚಿಕೆಯನ್ನು ಅರ್ಪಿಸಿದೆ

ಮೃತ್ಯುಮುಖದಿಂದ

ಗಂಡನನ್ನು ರಕ್ಷಿಸಿದ ಪುಣ್ಯಮಹಿಳೆ

ಹೈದರಾಬಾದಿಗೆ ಸೇರಿದ ಮನಗಾಲದ ಸಮೀಪದಲ್ಲಿಯ ಗ್ರಾಮದಲ್ಲಿ ಒಂದು ರಾತ್ರೆ 12 ಗಂಟೆಗಳ ಸಮಯದಲ್ಲಿ ನೂರಾರು ಮಂದಿ ಸಾಯುಧರಾದ ಕಮ್ಯುನಿಸ್ಟರು ಹೊಕ್ಕರು. ಬಡಬಗ್ಗರೆನ್ನದೆ ಗ್ರಾಮವನ್ನು ಕೊಳ್ಳೆಹೊಡೆದರು.

ಆ ಪ್ರಾಂತ್ಯದ ಪ್ರಜೆಗಳ ಸಹಾನುಭೂತಿಯನ್ನು ಪಡೆಯುತ್ತಿರುವ ವಿದ್ಯಾವಂತನಾದ ಗೋಪಯ್ಯನವರನ್ನು ಖೂನಿ ಮಾಡಲು ಕಮ್ಯೂನಿಸ್ಟರು ಅವರ ಮನೆಯ ಮೇಲೆ ಬಿದ್ದರು. ಕಾಂಗ್ರೆಸ್ಸಿನವರೆಂದು ಕೂಗಿಕೊಳ್ಳುತ್ತಾ ಅವರಿಗೆ ನಂಬಿಕೆಬರುವಂತೆ ಮಾಡಿ ಬಾಗಿಲನ್ನು ತೆಗೆಸಿ ಅತನನ್ನು ಪಿಸ್ತೂಲಿನಿಂದ ಸುಟ್ಟರು. ಗಂಡನೊಂದಿಗೇ ಇದ್ದ ಆತನ ಹೆಂಡತಿಯು ಪಿಸ್ತೂಲಿನ ಎಟಿಗೆ ಕೈಯನ್ನು ಅಡ್ಡವಾಗಿಟ್ಟು ಗಂಡನ ಪ್ರಾಣವನ್ನು ಕಾಪಾಡಿದಳು. ಮೃತ್ಯು ಮುಖದಲ್ಲಿ ಬಿದ್ದ ಗಂಡನನ್ನು ಜೀವಂತವಾಗಿ ಮಾಡಿಕೊಂಡ ಮಾನವತಿಯೆಂದು ಆಕೆಯನ್ನು ಕುರಿತು ಎಲ್ಲರೂ ಮಾತನಾಡಿಕೊಳ್ಳುತ್ತಿದ್ದಾರೆ. ಈ ದಂಪತಿಗಳ ದರ್ಶನಕ್ಕಾಗಿ ತೀರ್ಥಯಾತ್ರೆಗೆ ಹೋಗುವಂತೆ ಜನರು ಅವರ ಮನೆಗೆ ಹೋಗಿ ದರ್ಶನಮಾಡಿಕೊಂಡು ಬರುತ್ತಿದ್ದಾರೆ. ಪಿಸ್ತೂಲಿನ ಏಟು ತಪ್ಪುತ್ತಲೂ ಗೋಪಯ್ಯನವರು ಮನೆ ಹಿಂದಿನ ಗೋಡೆಯನ್ನು ದಾಟಿ ಹೋಗಿ ಹೊಲಗಳ ನಡುವೆ ಬಿದ್ದಿರಲು ಜನರು ಗುರ್ತಿಸಿಸಿ ಅವರನ್ನು ಮನುಗಾಲಕ್ಕೆ ತಂದರು. ಗಂಡನನ್ನು ಕಾಗಾಡಲಿಕ್ಕೆ ಹೋಗಿ ಗುಂಡಿನೇಟಿಗೆ ತುತ್ತಾದ ಆ ಪತಿವ್ರತಾ ರತ್ನವನ್ನು ಮುನಗಾಲಕ್ಕೆ ಸೇರಿಸಿದರು. 'ನಿಮ್ಮ ರಾಕ್ಷಸಿ ಕೃತ್ಯಗಳಿಂದ ನಮ್ಮ ರಾಷ್ಟ್ರೀಯತೆಯು ಬಲಿಯಾಗುವುದಿಲ್ಲವೆಂದು ಕಮ್ಯುನಿಷ್ಟ ಘಾತುಕರಿಗೆ ತೋರಿಸಿದಳು ಆಕೆ !

ಶಹಬಾಸ್ ತಾಯಿ, ನಿನಗೂ ನಿನ್ನ ಗತಿಗೂ ಧನ್ಯವಾದಗಳು!

'ಹೈದರಾಬಾದಿನಲ್ಲಿ ರಜಾಕರರನ್ನು ಓಡಿಸಿದರೂ ಕಮ್ಯೂನಿಸ್ಟರ ಹಾವಳಿಯು ಇದ್ದೇ ಇದೆ; ಈ ಮನೆಯ ಕಳ್ಳತನವನ್ನು ಅಡಗಿಸಬೇಕು' ಎಂದು ಜನರು ಹೇಳುತ್ತಿರುವರು. (ಮಾ)

ಬೆಂಗಳೂರು ದೈನಿಕ 'ಕೆಸರಿ' ಇಂದ ಸರ್ಕಾರ ರೂ. 2500 ಠೇವಣಿ ಕೇಳಿದೆ

ಪ್ರಜಾಪ್ರತಿನಿಧಿ ಸಭೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನ ಮೊನ್ನೆ ಪ್ರಾರಂಭವಾಯಿತು

ಮೈಸೂರಿನ ಮಹಾ ಪ್ರಧಾನಿ ಶ್ರೀ ಕೆ ಸಿ ರೆಡ್ಡಿಯವರು ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು

ವಿಶೇಷ ಅತಿಥಿ ಪೀಠದಲ್ಲಿ ಮೈಸೂರು ಘಟನಾ ಸಮಿತಿ ಮಹಾಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯಂ, ಘಟನಾ ಸಮಿತಿ ಉಪಾಧ್ಯಕ್ಷ ಶ್ರೀ ಗಾಂಜಿ ಬಸಪ್ಪ ಮತ್ತಿತರರು ಮಂಡಿಸಿದ್ದರು.

12 ಗಂಟೆಗೆ ಸರಿಯಾಗಿ ಸಮಾವೇಶಗೊಂಡ ಅಧಿವೇಶನದ ಅಧ್ಯಕ್ಷ ಶ್ರೀ ಕೆ ಸಿ ರೆಡ್ಡಿ 45 ನಿಮಿಷಗಳ ಕಾಲ ಭಾಷಣ ಮಾಡಿ 'ಜೈಹಿಂದ್' ಘೋಷಣೆಯೊಡನೆ ಮುಕ್ತಾಯವಿತ್ತರು

ಸಭೆಯ ಪದ್ಧತಿ ಪ್ರಕಾರ ಅಧ್ಯಕ್ಷ ಭಾಷಣದ ಕನ್ನಡ ತರ್ಜುಮೆಯನ್ನು ಶ್ರೀ ಸಿ ಕೆ ವೆಂಕಟರಾಮಯ್ಯನವರು ಪಠಿಸಿದರು

ಹಲವು ಪತ್ರಿಕೆಗಳ ಬಗ್ಗೆ ಪ್ರಭುತ್ವದ ಕ್ರಮ ಕುರಿತು ಅಸೆಂಬ್ಲಿಗೆ ನಿಲುವಳಿ ಸೂಚನೆ ಬಂದಿರುವುದಾಗಿ ವರದಿ

ಸಂಸ್ಥಾನದ ನೂತನ ರಾಜ್ಯಘಟನೆ ಈ ವರ್ಷಾಂತ್ಯದಲ್ಲಿ ಸಿದ್ಧವಾಗಿ ಮುಂದಿನ ವರ್ಷ ಪ್ರಾರಂಭ ಭಾಗದಲ್ಲಿ ಮಹಾ ಚುನಾವಣೆಗಳು ಜರುಗಲು ಸಾಧ್ಯವಾಗುವುದು ಅತನ ವಸನ ಒಗ್ಗೆ ನಾವು ಇಂಡಿಯಾ ಸರ್ಕಾರದ ಹಿಂಬಾಲಕರು ಅಲ್ಲೇನುಗತಿಯಾಗುವುದೋ ನಮಗಿಲ್ಲಿ ಆದೇ ಗತಿ ಮುಂದಿನ ಮಾಹೆ ತಾ | 1 ರಿಂದ ಸರ್ಕಾರ ನೇಮಕ ಮಾಡುವ ಬೆಲೆಗೆ ಲೈಸನ್ಸ್ ಪಡೆದ ಅಂಗಡಿಗಳಲ್ಲಿ ಅರವೆ ದೊರೆಯುವುದು : ಇದೇ ಅಧ್ಯಭಾಷಣದ ತಿರಳು

ನಿಧನರಾದ ಶ್ರೀಗಳಾದ ತಿಮ್ಮೇಗೌಡ, ನಾರಿಮನ್, ಜಿನ್ನಾರವರುಗಳಿಗೆ ಸಭೆ ಮೌನದಿಂದ ಎದ್ದು ಸಂತಾಪ ಸೂಚಿಸಿತು

ಸತ್ತವರಿಗೆ ಸೂಚಿಸುವ ಸಂತಾಪ ನಿರ್ಣಯವನ್ನೆಲ್ಲ ಕಾಂಗ್ರೆಸ್ ನಾಯಕ ಶ್ರೀ ಕೆ ಹನುಮಂತಯ್ಯನವರೇ ಮಂಡಿಸಿದರು

ಹೈದರಾಬಾದ್ ವಿಜಯದ ಬಗ್ಗೆ ಅಭಿನಂದನಾ ನಿರ್ಣಯ ಅಂಗೀಕೃತವಾಯಿತು

ಅಶ್ವ ಪಂದ್ಯ ತೆರಿಗೆ ಶೇ | 8 ರಷ್ಟು ಹೆಚ್ಚಳವರಿ ಮಾಡುವ ಬಗ್ಗೆ ಅರ್ಥ ಸಚಿವರ ಮಸೂದೆ ಸಭೆಯು ಒಪ್ಪಿತವಾಯಿತು

Edited, Printed and Published by M S Krishna Rao at the Satyavadi Press, Cheram Agrahar, Mysore

ವುಡ್ ಲ್ಯಾಂಡ್ಸ್

ಯಶಸ್ವಿ 2 ನೇ ವಾರ

(ಪ್ರತಿ ದಿನ 3 ಪ್ರದರ್ಶನಗಳು)

ಮಂತ್ರಾಜ್ ಶಾಂತಿ, ಮನೋರಮ ದಿಲೀಪಕುಮಾರ್, ಜೀವನ್, ದೀಕ್ಷಿತ್ ಮುಂತಾದವರು ಅಭಿನಯಿಸಿರುವ

ಘರ್-ಕಿ-ಇಜ್ಜತ್

(ಅತ್ಯಮೋಘ ಹಿಂದಿ ಚಿತ್ರ)

ಮೈಸೂರು ಸಂಸ್ಥಾನಕ್ಕೇ ಪ್ರಥಮ ಪ್ರದರ್ಶನ

Ghar - ki - Izzat

ದಸರಾ ಹಬ್ಬಕ್ಕಾಗಿ ಮೈಸೂರಿಗೆ ಬರುವ

ಅನೇಕರು ಸಲುವಾಗಿಯೂ ಹಾಗೂ ನಮ್ಮ ಸ್ಥಳಗಿರಾಕಿಗಳ ಅನುಕೂಲಕ್ಕಾಗಿಯೂ

ಒಂದು ಸ್ಟಾಲನ್ನು ದಸರಾ ವಸ್ತುಪ್ರದರ್ಶನಾಲಯದಲ್ಲಿ

ಬ್ಲಾಕ್ ಸಿ ನಂ. 29 — 30

ನಲ್ಲಿ ತೆರೆದಿರುತ್ತೇವೆ

ಜಿಲೆ— ಬೆಂಗಳೂರಿನ ಮಾಂಬಟದ ಬಿಲೆಯಲ್ಲಿಯೇ

ಚಂದಿಗಾಮ್ ಸಿಲ್ಕ್ ಸೀರೆಗಳು

(ಸ್ವಂತ ಫ್ಯಾಕ್ಟರಿಯಲ್ಲಿ ಸ್ಪೆಷಲ್ಲಾಗಿ ತಯಾರಿಸಿದ್ದು)

ಬೊಂಬಾಯಿ ಮತ್ತು ಬೆನಾರಿಸ್ ಸಿಲ್ಕುಗಳು ಮತ್ತು ಸೀರೆಗಳು

ಇತರೇ ಸಿಲ್ಕು ಮತ್ತು ಸೀರೆಗಳು ಸಹ ದೊರೆಯುತ್ತವೆ.

ಚಂದಿರಾಮ್ ಬ್ರದರ್ಸ್ BLOCK 29—30

ಪ್ರಧಾನ ಶಾಖೆ— 4 ಮಹಾತ್ಮಾ-ಗಾಂಧಿ ರೋಡು, ಬೆಂಗಳೂರು.

At Opera

9—10—48 ರಿಂದ

ಪ್ರತಿ ದಿನ 3 ಆಟಗಳು

ಬಾಲಸರಸ್ವತಿ

ಸೂರ್ಯನಾರಾಯಣ

ಲಿಂಗಮೂರ್ತಿ

ರಾಮಕೃಷ್ಣಶಾಸ್ತ್ರಿ

ಪಾತ್ರವಹಿಸಿರುವ

ಸುವರ್ಣಮಾಲ

(ತೆಲಗು)

ಸತ್ಯವಾದಿ ಸಂಸ್ಥಾಪಕರ ದಿನಾಚರಣೆ ಪ್ರಯುಕ್ತ ನಾಳೆ ಕಚೇರಿಗೆ ರಜಾ

ಸಂಪುಟ ೭ ಸಂಚಿಕೆ ೬] ॥ ಶ್ರೀ ॥ [೧॥ 11-10-48

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ: ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ: ವ. ಸ್ವ. ಸಂಘ

ಶ್ರೀ ದ್ವಾರಕಾಧೀಶ ವಿದ್ಯಾಪೀಠ, ದ್ವಾರಕಾ

ಶ್ರೀ ಜಗನ್ನಿಯಂತನಾದ ಭಗವಂತನ ಅಪಾರ ಕೃಪೆಯಿಂದ ಶ್ರೀ ದ್ವಾರಕಾ ಪೀಠಾಧೀಶ್ವರರಾದ **ಶ್ರೀ ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರು** ನಮ್ಮ ಭಾರತವರ್ಷದ ಚಾತುರ್ವರ್ಣ್ಯ ಹಿಂದೂ ಪ್ರಜೆಗಳ ಹಾಗೂ ಸಮಸ್ತ ಭೂಮಂಡಲದ ಪ್ರಜೆಗಳ ಹಿತಕ್ಕಾಗಿ ಶ್ರೀ ದ್ವಾರಕಾಧೀಶ ವಿಶ್ವವಿದ್ಯಾಪೀಠವೆಂಬ ಹೆಸರಿನಿಂದ ಸಂಸ್ಕೃತ ಯೂನಿವರ್ಸಿಟಿಯೊಂದನ್ನು ಸ್ಥಾಪಿಸುವ ಪ್ರಯತ್ನವನ್ನು ಕೈಗೊಂಡಿದ್ದಾರೆ. ಆ ವಿದ್ಯಾಪೀಠದ ಸ್ವರೂಪವನ್ನು ತಿಳಿಸಲು ಇಷ್ಟರಲ್ಲೇ ಗುಜರಾತೀ ಇಂಗ್ಲೀಷಿನ ಪುಸ್ತಕವು, ಶ್ರೀ ದ್ವಾರಕಾಧೀಶ ವಿಶ್ವವಿದ್ಯಾಪೀಠ ರೇಖಾದರ್ಶನ' ವೆಂಬ ಹೆಸರಿನಿಂದ ಪ್ರಕಟವಾಗಿ ದೇಶದ ಅನೇಕ ವಿದ್ವಾಂಸರ ಮನ್ನಣೆ ಪಡೆದಿದೆ. ಇದರ ಸಾಮಾನ್ಯ ಮಾಹಿತಿಯನ್ನು ಕನ್ನಡಲ್ಲಿ ಈಗ ನಿರೂಪಿಸಲಾಗುತ್ತಿದೆ.

ಈ ವಿದ್ಯಾಪೀಠದ ಕ್ಷೇತ್ರವು ಬಹಳ ವಿಶಾಲವಾಗಿದೆ. ಅಂದರೆ ಇದನ್ನು ಸಾಂಸ್ಕೃತಿಕ ಮಹಾ ಪ್ರವೃತ್ತಿ ಎನ್ನಬಹುದು. ಇದು ಸಂಸ್ಕೃತ ಮಹಾ ಪಾಠಶಾಲೆಯಲ್ಲ. ಇನ್ನೇನೆಂದರೆ ಅನೇಕ ವಿದ್ಯೆ ಮತ್ತು ಕಲೆಗಳ ವಾಸ್ತವಿಕ ವಿಶ್ವವಿದ್ಯಾಪೀಠವನ್ನೇ ಮಾಡುವ ಪ್ರಯತ್ನವಿದು. ಭರತಖಂಡದಲ್ಲೇ ಏಕೆ, ಇಡೀ ಭೂಮಂಡಲದಲ್ಲೇ ಇದು ಹೊಸದಾದ ಮಹಾಪ್ರಯತ್ನ. ಈ ವಿದ್ಯಾಪೀಠದಲ್ಲಿ ಭಾರತವರ್ಷದ ಅಂದರೆ ಆರ್ಯರ ಪ್ರಾಚೀನ, ಶಾಸ್ತ್ರೋದಿತ ಸಂಸ್ಕೃತಿಯ ಭೂಮಿಕೆಯ ಮೇಲೆ ಎಲ್ಲಾ ವಿದ್ಯೆ, ಕಲೆ, ಭಾಷೆ ಮುಂತಾದ ವಿಷಯಗಳ ಜ್ಞಾನದಾನ ಮಾಡುವ ವಿಶಾಲಭಾವನೆ ಇದೆ. ಈ ವಿದ್ಯಾಪೀಠದಲ್ಲಿ ಓದಿ ತೇರ್ಗಡೆಯಾದವರು ಹಣ ಸಂಪಾದನೆ ಮತ್ತು ಒಳ್ಳೇ ಯೋಗಕ್ಷೇಮವನ್ನು ಸಾಧಿಸುವ ಶಕ್ತಿಯುಳ್ಳವರಾಗುವುದು ಮಾತ್ರವಲ್ಲ ; ಸಮಾಜದ ವಿವಿಧ ಪ್ರವೃತ್ತಿಗಳಲ್ಲಿ ನೇತೃಗಳಾಗಿ ಯೋಗ್ಯ ನಾಗರೀಕರಾಗುವ ಆದರ್ಶವು ಈ ವಿದ್ಯಾಪೀಠದಲ್ಲಿದೆ. ಈ ವಿದ್ಯಾಪೀಠದ ಅಡಿಗಲ್ಲು ಶ್ರುತಿ, ಸ್ಮೃತಿ, ಪುರಾಣಾದಿ ಶಾಸ್ತ್ರೋದಿತ ಸನಾತನ ಧರ್ಮವೇ ಇರುವುದು ಈ ನಮ್ಮ ಆರ್ಯ ಮಹಾಸಂಸ್ಕೃತಿಯ ಔದಾರ್ಯವೂ ಸಹಿಷ್ಣುತೆಯೂ, ವಿಶಾಲತೆಯೂ ಅಗಾಧವಾಗಿದೆ 'ಸರ್ವಸಂಸ್ಕೃತಿಗಳಿಗೂ ಆದಿ ವಾತೆಯಾದ ಈ ಸಂಸ್ಕೃತ ಸಂಸ್ಕೃತಿಯ ಪ್ರಜಾರವು ಎಲ್ಲಾ ಕಡೆಯಲ್ಲಿಯೂ ಆಗಬೇಕೆಂಬುದು ವಿಶ್ವವಿದ್ಯಾ ಪೀಠದ ಗುರಿ. ಈ ಸಂಸ್ಕೃತಿಯು ಗೌರವಾತಿಶಯಕ್ಕೆ ಕುಂದು ಬರದ ರೀತಿಯಲ್ಲಿ ಸಮುಚಿತ ಸಾಧನ ಮತ್ತು ಪ್ರಕ್ರಿಯೆಯಿಂದ ಸಾಧ್ಯವನ್ನು ಸಿದ್ಧಿಗೊಳಿಸಲು ಈ ವಿದ್ಯಾಪೀಠವು ಪ್ರಯತ್ನಿಸುವುದು.

ಈ ವಿದ್ಯಾಪೀಠದಲ್ಲಿ ನಾಲ್ಕು ಮುಖ್ಯ ವಿಭಾಗಗಳಿರುವವು ಒಂದು ಅಧ್ಯಾಪನ ವಿಭಾಗ, ಎರಡನೇದು ಸಮ್ಮಿಲಿತ ಸಂಸ್ಥಾ ವಿಭಾಗ, ಮೂರನೇದು ಸಾಮಾನ್ಯ ಪರೀಕ್ಷಾ ವಿಭಾಗ, ನಾಲ್ಕನೇದು ಪ್ರಚಾರ ವಿಭಾಗ. ಮೊದಲನೇ ವಿಭಾಗದ ಮೂಲಕ ವಿದ್ಯಾಪೀಠವು ಪಾಠಶಾಲೆ, ವಿದ್ಯಾಲಯ, ಮಹಾವಿದ್ಯಾಲಯ, ವಿಶಿಷ್ಟ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಕಲಿಯುವ ಏರ್ಪಾಡಿರುವುದು. ಎರಡನೇ ವಿಭಾಗದಲ್ಲಿ ವಿದ್ಯಾಪೀಠಕ್ಕಲ್ಲಿ ವಿದ್ಯಾಪೀಠದೊಂದಿಗೆ ಸಂಬಂಧಿಸುವ, ಸೇರುವ ಅನೇಕ ರೀತಿಯ ವಿದ್ಯಾಲಯಗಳಿಗೆ ಸ್ಥಾನವಿರುವುದು. ಆ ವುಗಳು ವ್ಯವಸ್ಥೆಯಲ್ಲಿ ಸ್ವತಂತ್ರವಾಗಿದ್ದರೂ ಅಭ್ಯಾಸಕ್ರಮಾದಿಗಳಲ್ಲಿ ವಿದ್ಯಾಪೀಠವನ್ನು ಅನುಸರಿಸುವುವು. ಮೂರನೇ ವಿಭಾಗದಲ್ಲಿ ವಿವಿಧ ಪರೀಕ್ಷೆಗಳಿವೆ. ಈ ರೀತಿಯು ವಿದ್ಯಾಲಯಗಳಲ್ಲಿ ಶಿಕ್ಷಣ ಹೊಂದದೆ ಇರುವ ಸ್ಕೂಲು, ಕಾಲೇಜುಗಳ ವಿದ್ಯಾರ್ಥಿಗಳಿಗೂ, ಆರ್ಯ ಸಂಸ್ಕೃತಿಯ ಸವಿಯನ್ನ ಪೇಕ್ಷಿಸುವ ಸ್ತ್ರೀ ಪುರುಷರಿಗೂ ಆಯಾಯ ಗ್ರಂಥಗಳ ಸ್ವಂತ ಅಭ್ಯಾಸದ ಮೂಲಕ ಆರ್ಯ ಸಂಸ್ಕಾರವನ್ನು ಪುನರುಜ್ಜೀವಗೊಳಿಸುವ ಪ್ರಯತ್ನವಿದು. ನಾಲ್ಕನೇ ಪ್ರಚಾರ ವಿಭಾಗದಲ್ಲಿ ನಮ್ಮ ವಿದ್ಯೆ, ಕಲೆ, ಧರ್ಮ ಭಾವನೆ ಆದರ್ಶಗಳು ಭಾರತವರ್ಷದಲ್ಲಿಯೂ, ಇತರ ದೇಶಗಳಲ್ಲಿಯೂ ಜಿನ್ನಾಗಿ ಪ್ರಚಾರವಾಗುವಂತೆ ತಕ್ಕ ಏರ್ಪಾಡಿರುವುದು. ಇದರಿಂದ ನಮ್ಮ ವಿದ್ವಾಂಸರು, ಪಂಡಿತರು, ಅಭ್ಯಾಸಿಗಳಲ್ಲಿ ಸಂಘಟನೆಯಾಗುವಂತೆಯೂ, ನಮ್ಮ ಸಂಸ್ಕಾರಿತೆಯ ಹೆಚ್ಚು ಹೆಚ್ಚು ಸುಪುಷ್ಟವಾಗುವ, ಸುರಕ್ಷಿತವಾಗಿಡುವ ಪ್ರಸಂಗವು ಪ್ರಾಪ್ತವಾಗುವಂತೆಯೂ, ಒಟ್ಟಿನ ಮೇಲೆ ಈ ಸಂಸ್ಕಾರಿತೆಯ ವಿಷಯದಲ್ಲಿ ಜಗತ್ತಿನ ವಾತಾವರಣವು ಹೆಚ್ಚು ಪೂಜ್ಯ ಭಾವನೆಯುಳ್ಳದ್ದಾಗುವಂತೆಯೂ ಈ ವಿಭಾಗವು ವಿವಿಧ ರೀತಿಯಿಂದ ಕೆಲಸ ಮಾಡುವುದು.

ಮೇಲ್ಕಂಡ ಸಂಕ್ಷಿಪ್ತ ವಿವರಣೆಯು ಮೇಲಿನಿಂದ ಓದುಗರಿಗೆ ತಿಳಿಯದೇ ಇಂದು. ಈ ಹೊಸ ವಿದ್ಯಾಪೀಠದ ಆಶಯವು ಉದಾತ್ತವಾದದ್ದು. ಇದು ಯಾವುದೇ ಪಂಥದ ದುರಾಗ್ರಹವುಳ್ಳ ಸಂಸ್ಥೆಯಲ್ಲ. ಇದರ ಕ್ಷೇತ್ರವು ನಿಶಿಷ್ಟವಾದುದರಿಂದ ಇತರ ವಿದ್ಯಾಪೀಠಗಳೊಂದಿಗೆ ಸಂಘರ್ಷವಾಗುವ ಭಯವಿಲ್ಲ. ಇನ್ನೇನೆಂದರೆ ಯಾವುದೇ ಧರ್ಮದ ಶಿಕ್ಷಣವನ್ನೂ ಕೊಡದಿರುವ ವಿದ್ಯಾಪೀಠಗಳಿಗಿಂತ ಈ ವಿದ್ಯಾಪೀಠವು ವಿಲಕ್ಷಣವಾದುದು ಮತ್ತು ಬೇರೆ ರೀತಿಯಿಂದ ಆಧುನಿಕ ಜಗತ್ತಿನ ವಿದ್ಯಾಭ್ಯಾಸದಲ್ಲಿ ಕಂಡುಬರುವ ಧರ್ಮ ಮತ್ತು ಚಾರಿತ್ರ್ಯ ಶೀಲಭಯ ನ್ಯೂನತೆಯನ್ನು ತೊಲಗಿಸುವ ಸಂಸ್ಥೆಯಿದು. ಇದರಿಂದ ಸಮಸ್ತ ಭಾರತೀಯ ಆರ್ಯಜೀವನದಲ್ಲಿ ಹೊಸ ಚೇತನಶಕ್ತಿಯುದಯಿಸುವುದು. ಸಮಸ್ತ ಭಾರತವರ್ಷದಲ್ಲಿ ನವೀನವಾದ ಸಹಕಾರತೆಯೂ, ಸಹಿಷ್ಣುತೆಯೂ ಆವಿರ್ಭವಿಸುವುದು. ಮತ್ತು ಸಮಗ್ರ ಮಾನವಜಾತಿಗೊಂದು ನವೀನವಾದ ಬೆಳಕೂ, ನವೀನವಾದ ದೃಷ್ಟಿಬಿಂದುವೂ, ನವೀನವಾದ ಸಂತೃಪ್ತಿಯೂ ಪ್ರಾಪ್ತವಾಗುವುದು.

ವರ್ಧಂತ್ಯುತ್ಸವ

ನಮ್ಮೀ ಭರತಖಂಡದ ಹಲವಾರು ಧರ್ಮ ಸಂಸ್ಥೆಗಳ ಸಂಸ್ಥಾಪಕರೂ, ಸಂರಕ್ಷಕರೂ ಆಗಿ, ಧರ್ಮಸಂಸ್ಥಾಪನೆಗಾಗಿ ಅವತರಿಸುವ ಶ್ರೀ ದ್ವಾರಕಾ ಜಗದ್ಗುರುಗಳವರು ನಮ್ಮ ಆಗಮತ್ರಯ ಮಹಾಮಂಡಲವನ್ನು ಸ್ಥಾಪಿಸಿ, ಅದರ ಮಹಾಪೋಷಕರಾಗಿಯೂ ಇರುತ್ತಾರೆ. ಅವರ ವರ್ಧಂತ್ಯುತ್ಸವವು 3-10-38 ಆಶ್ವಿಯುಜ ಶುದ್ಧ ಪಾಡ್ಯವಿಾ ಭಾನುವಾರ ಆಗಮತ್ರಯ ಮಹಾಮಂಡಲದ ಕಾರ್ಯಾಲಯದಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಶ್ರೀ ವಿದ್ಯಾ ಗಣಪತಿ. ಶ್ರೀ ಶಾರದಾ, ಶ್ರೀ ಗಾಯಿತ್ರೀ ದೇವರುಗಳಿಗೆ ವಿಶೇಷ ಪೂಜಾ ಮಹಾಮಂಗಳಾರತಿಯೊಡನೆ ಪ್ರಾರ್ಥನೆಯನ್ನು ಸಲ್ಲಿಸಲಾಯಿತು.— ಎಂದು ಮಂಡಲದ ಕಾರ್ಯದರ್ಶಿ ಶ್ರೀ ಆಗಮಿಕ ಕೃಷ್ಣದೀಕ್ಷಿತರು ತಿಳಿಸುತ್ತಾರೆ

ಈ ವಾರದ ಭವಿಷ್ಯ

ಓಂ ಜ್ಯೋತಿಷ್ಯರಿಂದ.

ಮೇಷ— ಆರೋಗ್ಯವುಂಟಾಗಲೀ ಮನೋವ್ಯಾಕುಲತೆ ಇರುತ್ತದೆ. ಶತ್ರು ಭಯ ಗುಪ್ತ ಚಿಂತೆ

ವೃಷಭ— ಧನಾದಿಕಾಯವಿದೆ, ಮಾನಸಿಕ ಆನಂದವಿದೆ

ಮಿಥುನ— ಕೈಗೊಂಡ ಕಾರ್ಯಗಳಲ್ಲಿ ಜಯ

ಕರ್ಕಾಟಕ— ಕಾರ್ಯಹಾನಿ ಮನೋಹಾನಿ ವ್ಯವಹಾರದಲ್ಲಿ ವ್ಯಸನ

ಸಿಂಹ— ಧನಿಕರ ಸಹಾಯವುಂಟು ಧನಲಾಭವುಂಟು ಧರ್ಮಕಾರ್ಯಗಳಲ್ಲಿ ತತ್ಪರತೆಯುಂಟು

ಕನ್ಯಾ— ಖರ್ಚು ಹೆಚ್ಚು, ವ್ಯವಹಾರದಲ್ಲಿ ಸ್ವಲ್ಪ ತೊಂದರೆ, ಗೃಹಕೃತ್ಯದಲ್ಲಿ ಸ್ವಲ್ಪ ಮೈಮನಸ್ಸು.

ತುಲ— ಚಿಂತೆ ಹೆಚ್ಚುವುದು, ವ್ಯವಹಾರದಲ್ಲಿ ತಾಪತ್ರಯ ಹೆಚ್ಚು

ವೃಶ್ಚಿಕ — ಆರೋಗ್ಯವಿರುವದಿಲ್ಲ ಸಂಸಾರದಲ್ಲಿ ಅಶಾಂತತೆ

ಧನಸ್ಸು— ಸಾಧುಸಂತರ ಭೇಟಿಯುಂಟು, ಮನೋರಂಜಕ ಕಾರ್ಯಗಳಲ್ಲಿ ಪ್ರವೃತ್ತಿಯುಂಟು

ಮಕರ — ಆನಂದದಾಯಕವಾದ ವಾರ. ಉತ್ಸಾಹದಾಯಕ ವಾರ

ಕುಂಭ— ಧನಲಾಭವುಂಟು ಆರೋಗ್ಯವುಂಟು ಮನಶ್ಯಾಂತತೆಯುಂಟು,

ಮೀನ — ನೋಡಿ ನಡಿಯಬೇಕಾದ ವಾರವಿದು. ಪ್ರಿಯವಾದ ನಡಿಯಿಂದಲೇ ಕಾರ್ಯಸಾಧನೆ ಮಾಡಿಕೊಳ್ಳಬೇಕು.